Sri P. M. NADGOUDA (Minister for Development).—

(*a*) Yes.

	Name of T.D.B.		*Amount*
1	Karwar	...	43,284-00
2	Ankola	...	48,220-00
3	Kumta	...	39,094-00
4	Honnavar	...	44,661-00
5	Bhatkal	...	44,030-00
6	Sirsi	...	41,332-00
7	Siddapur	...	45,522-00
8	Yellapur	...	51,894-00
9	Mundgod	...	45,178-00
10	Haliyal	...	44,087-00
11	Supa	...	52,698-00
	Total	...	5,00,000-00

(*c*) The Forest area in N. Kanara District., exceeds 75 per cent of the total area and the amounts which the local bodies can get by way of assignment land Revenue will be so small that they cannot effectively discharge their duties. It was therefore, necessary to supplement these assignments. It may be added that the former Government of Bombay was sanctioning a grant of 2 per cent of the Forest Revenue to the District Local Board of the District.

(*d*) Will be considered.

Motion against Sri S. K. Patil

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಹಿಂದಿನ ಸಲ ನಾವು ಇಲ್ಲಿ ಸೇರಿದಾಗ ಎಸ್. ಕೆ. ಪಾಟೀಲ್ ಮತ್ತು ಇತರರು ಕೆಲವರಮೇಲೆ ಒಂದು ಮೋಷನ್ ಕೊಟ್ಟಿದ್ದೆವು.

MR. SPEAKER.—One day during the course of this Session will be allotted for the discussion. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತಿರ್ಮಾನಮಾಡಿ ಹೇಳುತ್ತೇನೆ.

Notice of adjournment motion: *re*: Land Reforms and the treatment of Political prisoners in the Jail

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸ್ವಾಮಿ ಅಧ್ಯಕ್ಷರೇ, ನಾನು ತಮ್ಮ ಒಪ್ಪಿಗೆಗಾಗಿ ರೂಲ್ 50ರ ಪ್ರಕಾರ ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೆ. ಅದು ಈ ವಿಷಯಕ್ಕೆ ಸಂಬಂಧಪಟ್ಟಿದೆ: ಹಿಂದೆ ಕಾಂಗ್ರೆಸ್ ಸರಕಾರದವರು ಸ್ವಾತಂತ್ರ್ಯ ಬಂದಮೇಲೆ ಸುಮಾರು 22 ವರ್ಷಗಳಲ್ಲಿ ಮೈಸೂರು ರಾಜ್ಯದಲ್ಲಿ ಬಡ ಜನರಿಗೆ ಜಮೀನು ಹಂಚಿಕೆ ಮಾಡುತ್ತೇವೆ, ಸರಕಾರದ

ವಶದಲ್ಲಿರುವ ರೆವೆನ್ಯೂ ಹಾಗೂ ಫಾರೆಸ್ಟ್ ಪ್ರದೇಶದಲ್ಲಿ ಸಾಗುವಳಿಗೆ ಯೋಗ್ಯವಾಗಿರುವ ಸರಕಾರಿ ಪ್ರದೇಶವನ್ನು ಮಂಜೂರು ಮಾಡುತ್ತೇವೆ ಎಂದು ಹೇಳಿದ್ದರು. ಆ ಮಾತು ಸ್ವಾತಂತ್ರ್ಯ ಬಂದಮೇಲೆ ಮಾತ್ರ ಹೇಳಿಲ್ಲ, ಸ್ವಾತಂತ್ರ್ಯ ಬರುವುದಕ್ಕೆ ಪೂರ್ವದಲ್ಲಿ ಸಹ ಕಾಂಗ್ರೆಸ್ಸಿನವರು ಕರಾಚಿ ಅಧಿವೇಶನದಲ್ಲಿ ಸಹ ಉಳುವವನೇ ಹೊಲದ ಒಡೆಯ ಆಗಬೇಕು, ಬಡವರಿಗೆ ಭೂಮಿಯು ಹಂಚಿಕೆ ಯಾಗಬೇಕು ಎಂದು ಹೇಳಿದ್ದಾರೆ. ಅದರಂತೆ ಹಲವರು ಜಮೀನಿಗೆ ದರಖಾಸ್ತು ಕೊಟ್ಟಿದ್ದಾರೆ. ಅಂಥ ದರಖಾಸ್ತುಗಳು ಸುಮಾರು ಲಕ್ಷಗಟ್ಟಲೆ ಇರಬೇಕು.

ಸ್ವಾತಂತ್ರ ಬಂದ ಅವರು ಕೊಟ್ಟಿರತಕ್ಕ ಅರ್ಜಿಗಳು ಇನ್ನೂ ಕೂಡ ತಾಲ್ಲೂಕು ಆಫೀಸುಗಳು, ಅಸಿಸ್ಟೆಂಟ್ ಕಮೀಷನರುಗಳ ಆಫೀಸುಗಳು ಮತ್ತು ಜಿಲ್ಲಾಧಿಕಾರಿಗಳ ಆಫೀಸುಗಳಲ್ಲಿ ವಿಲೇವಾರಿ ಹೊಂದದೆ ಹಾಗೆಯೇ ಧೂಳು ತಿನ್ನುತ್ತಾ ಬಿದ್ದಿರುತ್ತದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ರಾಜ್ಯಾಂಗದಲ್ಲಿ ಹಕ್ಕು ಇದೆ. ಇವತ್ತು ಸರ್ಕಾರ ನಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳದೇ ಇರತಕ್ಕೆ ಪರಿಸ್ಥಿತಿಯನ್ನು ತಂದುಕೊಂಡಾಗ, ನಮ್ಮನ್ನು ನೋಡಿಕೊಳ್ಳದಿದ್ದಾಗ ನಾನು ನಮ್ಮ ಪರಿಹಾರವನ್ನು ಹೊಂದುವುದಕ್ಕೆ ರಾಜ್ಯಾಂಗಬದ್ಧವಾದ ಹಕ್ಕು ನಮಗೆ ಇದೆ. ಸರ್ಕಾರಕ್ಕೆ ಸೇರಿರತಕ್ಕ ಜಮೀನನ್ನು ಬಿಡುಗಡೆ ಮಾಡಿ ಅದನ್ನು ಮಂಜೂರು ಮಾಡತಕ್ಕ ಅಧಿಕಾರವನ್ನು ಸರ್ಕಾರಕ್ಕೆ ಕೊಟ್ಟು, ಆ ಜಮೀನನ್ನು ಮಂಜೂರು ಮಾಡಿಸಿಕೊಳ್ಳುವುದಕ್ಕೆ ಅರ್ಜಿ ಕೊಟ್ಟಿದ್ದರೂ ಕೂಡ ಪರಿಹಾರ ಸಿಕ್ಕಲಿಲ್ಲ. ಆದ್ದರಿಂದ ಆ ಜಮೀನು ನಮ್ಮದು ಅನ್ನತಕ್ಕ ಆಧಾರದಮೇಲೆ ಸರ್ಕಾರಕ್ಕೆ ಅರ್ಜಿಕೊಟ್ಟು ಬೇಡತಕ್ಕ ಕಾಲ ಇದು ಅಲ್ಲ. 22 ವರ್ಷ ನಾವು ಕಾದೂ ಕಾದೂ ಅವರನ್ನು ಕಾಡಿ ಬೇಡಿ, ಪಡಬಾರದ ಕಷ್ಟ ನಷ್ಟ ಎಲ್ಲವನ್ನೂ ಅನುಭವಿಸಿ ಅನುಕಂಪ ವ್ಯಕ್ತ ಮಾಡಿದರೂ ಕೂಡ ಈ ಕಾಂಗ್ರೆಸ್ ಸರ್ಕಾರ ಕಣ್ಣು ತೆರೆಯಲಿಲ್ಲ. ಈ ಸರ್ಕಾರಕ್ಕೆ ಕಣ್ಣು ಇಲ್ಲ, ಕಿವಿ ಕೇಳಿಸುವುದಿಲ್ಲ. ಈ ಪರಿಸ್ಥಿತಿಯಲ್ಲಿ ಬಡವರೇ ಹೋಗಿ ಅಲ್ಲಿ ಸಾಗುವಳಿ ಮಾಡಿದ್ದಕ್ಕೆ ಅವರಮೇಲೆ ತಕರಾರು ತಪ್ಪೆ : ಅಂತ ಹಾಕಿ ಟಿ. ಟಿ. ಫೈನ್ ಅಂತ ದಂಡ ಹಾಕಿದ್ದಾರೆ. ಯಾರು ತಪ್ಪು ಮಾಡುತ್ತಾರೆ ಅವರಿಗೆ ದಂಡ ಹಾಕಬೇಕು ನಿಜ. ಊರಿನ ಜನ ತಪ್ಪು ಮಾಡಿದರೆ 'ನ್ಯಾಯ ಪರಿಪಾಲನೆ ಮಾಡುವಿರಿ' ವಚನ ಕೊಟ್ಟು ವಚನದಂತೆ ನಡೆದುಕೊಳ್ಳದಿದ್ದರೆ ದಂಡ ಹಾಕುವುದು ವಾಸ್ತವಿಕ. ಇಲ್ಲ ವಚನ ಕೊಟ್ಟ ಸರ್ಕಾರ ಅದರಂತೆ ನಡೆದುಕೊಳ್ಳದೇ ಬಡವರಮೇಲೆ ದಂಡ ಹಾಕಿದ್ದಾರೆ. ದಂಡ ಹಾಕಬೇಕಾಗಿದ್ದರೆ ಅದು ಈ ಕಾಂಗ್ರೆಸ್ ಸರ್ಕಾರದಮೇಲೆ ಹಾಕಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಯಾರೇ ಆಗಲಿ ಜಮೀನು ಇಲ್ಲದವರಿಗೆ ಜಮೀನು ಹಂಚಿಕೆ ಮಾಡುತ್ತೇವೆ ಅಂತ ಹೇಳಿ ವಚನ ಕೊಟ್ಟ ಈ ಕಾಂಗ್ರೆಸ್ ಸರ್ಕಾರ, ಈ ಕಾಂಗ್ರೆಸ್ ಜನ 22 ವರ್ಷಗಳಿಂದ ಆಡಿಳಿತ ನಡೆಸಿದ್ದಾರೆ, ತಾವು ಕೊಟ್ಟ ವಚನವನ್ನು ಪರಿಪಾಲನೆ ಮಾಡಲಿಲ್ಲ. ಇಂತಹವರನ್ನು ಸಾರ್ವಜನಿಕ ಸ್ಥಳದಲ್ಲಿ ನಿಲ್ಲಿಸಿ ವಿಚಾರಣೆ ಮಾಡಬೇಕು. ಇಲ್ಲಿ ಈಗೇನು ನಮ್ಮ ಮುಂದೆ ಕುಳಿತಿದ್ದಾರೆ ಇವರುಗಳು ಮತ್ತು ಎರ್ನಾಮಿನಿಸ್ಟ್ರುಗಳು, ಈ ಮಂತ್ರಿಮಂಡಲ ಮತ್ತು ಕಾಂಗ್ರೆಸ್ ಜನ ಯಾರಿದ್ದಾರೆ ಅವರನ್ನು ಸಾರ್ವಜನಿಕ ಸ್ಥಳದಲ್ಲಿ ವಿಚಾರಣೆ ಮಾಡಿ 22 ವರ್ಷಗಳ ಕಾಲ ಆಡಳಿತ ನಡೆಸಿ ಇದೇನೆ ನೀವು ಮಾಡಿರುವುದು ಎಂದು ಹೇಳಿ ಕೊಟ್ಟ ವಚನದಂತೆ ನಡೆಯದೇ ಇರತಕ್ಕ ನೀವು ತಪ್ಪಿತಸ್ಥರು ಎಂದು ದಂಡ ಹಾಕತಕ್ಕ ಕಾಲ ಬಂದರೆ ನಾನು ಬಹಳ ಸಂತೋಷಪಡುತ್ತೇನೆ. ರಾಜ್ಯಾಂಗಬದ್ಧವಾಗಿ ಸತ್ಯಾಗ್ರಹ ಮಾಡತಕ್ಕ ಹಕ್ಕು ನಮಗೆ ಇದೆ, ಸಂಯುಕ್ತ ಸೋಷಿಯಲಿಸ್ಟ್ ಪಕ್ಷದ ಜನ ಸರ್ಕಾರಕ್ಕೆ ಸೇರಿರತಕ್ಕ ರೆವಿನ್ಯೂ ಜಮೀನುಗಳಲ್ಲೂ ಹಾಗೂ ಫಾರೆಸ್ಟ್ ಇರಾಖೆಗೆ ಸೇರಿರತಕ್ಕ ಸಾಗುವಳಿಗೆ ಯೋಗ್ಯವಾಗಿರತಕ್ಕ ಜಮೀನುಗಳಲ್ಲೂ ನುಗ್ಗಿ ಆ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಸಾಗುವಳಿ ಮಾಡಿರುವುದು ಅಕ್ರಮ ಸಾಗುವಳಿ ಅಲ್ಲ ಕ್ರಮವಾದ ಸಾಗುವಳಿ ಆಗಿದೆ. ಆ ಜಮೀನು ನಮ್ಮದು, ಅದರ ಹಕ್ಕು ನಮ್ಮದು, ಅದರ ಒಡೆತನ ನಮ್ಮದು, ಭೂ ಸ್ವಾಮಿತ್ವ ನಮ್ಮದು, ನಮಗೆ ಸಲ್ಲಬೇಕಾದಂತಹ ಭೂಸ್ವಾಮಿತ್ವವನ್ನು ನಾವು ಪಡೆದುಕೊಂಡಿದ್ದೇವೆ. ಈಗಾಗಲೇ ಶಿವಮೊಗ್ಗ ಜಿಲ್ಲೆಯಲ್ಲಿ ಸೊರಬ, ಸಾಗರ, ತೀರ್ಥಹಳ್ಳಿ ಮುಂತಾದ ಹಲವಾರು ಕಡೆಗಳಲ್ಲಿ ಈ ರೀತಿ ಆಗುತ್ತಾ ಇರುವುದು ಪತ್ರಿಕೆಗಳಲ್ಲಿ ಬಂದಿದೆ. ಇದು ರಾಜ್ಯಂಗ ಬದ್ಧವಾದ ಹಕ್ಕು, ಇದನ್ನು ಚಲಾವಣೆ ಮಾಡಲಿಕ್ಕೆ ನಾವು ಬಾಧ್ಯಸ್ತರು. ಈ ಒಂದು ಆಂದೋಲನ ಪ್ರಾರಂಭವಾದಮೇಲೆ ಸಿರಸಿ ತಾಲ್ಲೂಕಿನಲ್ಲಿ ನೂರಾರು ಜನರು ಅರೆಸ್ಟ್ ಆಗಿ ಜೈಲಿಗೆ ಹೋಗಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ, ಸೊರಬ ತಾಲ್ಲೂಕಿನಲ್ಲಿ, ಚಂದ್ರಗುತ್ತಿ ಹೋಬಳಿ, ಷಿಕಾರಿಪುರ ತಾಲ್ಲೂಕ್, ಹೀಗೆ ಆ ಜಿಲ್ಲೆಯಲ್ಲಿ ಇನ್ನೂ 7-8 ಕಡೆಗಳಲ್ಲಿ ಸತ್ಯಾಗ್ರಹ ನಡೆಯುತ್ತಿದೆ. ಈಗಾಗಲೇ ಸಾವಿರಾರು ಎಕರೆ ಜಮೀನನ್ನು ಸ್ವಾಧೀನಮಾಡಿಕೊಳ್ಳಲಾಗಿದೆ. ಹಾಲಿ ನಾವು ಎಂಟು ಸಾವಿರ ಚಿಲ್ಲರೆ ಎಕರೆಗಳನ್ನು ಪಡೆದಿದ್ದೇವೆ. ಕಾಂಗ್ರೆಸ್ ಸರ್ಕಾರದವರು ಇಲ್ಲಿಯವರೆಗೂ ಮಾಡಿರತಕ್ಕ ತಪ್ಪಿಗೆ ಅವರಿಗೆ ಒಂದು ಪಾಠವನ್ನು ಕಲಿಸುವುದಕ್ಕಾಗಿ ನಾವು ಈ ಕಾರ್ಯಕ್ರಮವನ್ನು ಕೈಗೊಂಡಿ

(ಶ್ರೀ ಎಸ್. ಬಂಗಾರಪ್ಪ)

ದ್ವೇಷ. ಇದು ನಮ್ಮ ಹಕ್ಕನ್ನು ಸಾಧಿಸತಕ್ಕ ಒಂದು ಮಾರ್ಗ. ಅದನ್ನು ನಾವೀಗ ಅನುಸರಿಸುತ್ತಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಈಗ ಅಧಿಕ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಕೂಡ ದೇಶದಲ್ಲಿ ಇಂಥ ಅನೇಕ ಸತ್ಯಾಗ್ರಹಗಳನ್ನು ಮಾಡಿದೆ. ಹಿಂದೆ ಇವರು ಜೈಲಿನಲ್ಲಿದ್ದಾಗಲೂ ಅಲ್ಲಿ ಕೂಡ ಉಪವಾಸ ಸತ್ಯಾಗ್ರಹವನ್ನು ನಡೆಸಿದ್ದಾರೆ. ಆ ಸತ್ಯಾಗ್ರಹಕ್ಕೆ ಕಾರಣವೇನೆಂಬುದು ಎಲ್ಲರಿಗೂ ತಿಳಿದೇ ಇದೆ. ಇವರು ಆ ದಿವಸ ರಾಜಕೀಯ ಖೈದಿಗಳಿಗೆ ಏನು ಸೌಲತ್ತುಗಳನ್ನು ಕಾನೂನು ಪ್ರಕಾರ ಕೊಡಬಹುದಾಗಿತ್ತೋ ಅಷ್ಟನ್ನು ಕೇಳುವುದಕ್ಕಾಗಿ ಇವರು ಜೈಲಿನಲಿದ್ದಾಗ ಉಪವಾಸ ಸತ್ಯಾಗ್ರಹವನ್ನು ಮಾಡಿದ್ದಾರೆ. ಆದರೆ ಹಾಲಿ ಇರತಕ್ಕ ಸರ್ಕಾರಕ್ಕೂ ಮತ್ತು ಇವರಿಗೆ ಹಿಂದೆ ಇಲ್ಲದ್ದ ಆ ಇಂಗ್ಲೀಷ್ ಸರ್ಕಾರಕ್ಕೂ ಏನೂ ವ್ಯತ್ಯಾಸವೇ ಇಲ್ಲ. ಅಧಿಕಾರ ಕುರ್ಚಿಯಮೇಲೆ ಆ ಕೆಂಪು ಜನರಿರುವುದಕ್ಕೆ ಬದಲಾಗಿ ಇವರಿದ್ದಾರೆ. ಈ ದಿವಸ ಜೈಲಿನಲ್ಲಿ ಸಾವಿರಾರು ಜನರು ಕೊಳೆಯುತ್ತಿದ್ದಾರೆ. ಇವರು ಕೇವಲ ರಾಜಕೀಯ ಖೈದಿಗಳೇ ವಿನಾ ಇವನೇನೂ ಖೂನಿ ಅಥವಾ ಮರ್ಡರುಗಳನ್ನು ಮಾಡಿರತಕ್ಕ ಅಪರಾಧಿಗಳಲ್ಲ. ಇವರಿಗೆ ನಾನು ಕೇಳುತ್ತಿರುವುದು ಸುಪತ್ತಿಗೆಯುನಲ್ಲ ಲೇಪುಗಳನ್ನಲ್ಲ. ಕಾನೂನು ಪ್ರಕಾರ ಅವರಿಗೆ ಕೊಡಬೇಕೆಂದಿರುವ ಒಂದು ಹಾಸಿಗೆ ಒಂದು ಹೊದಿಕೆಯನ್ನಾದರೂ ಕೊಡಿ ಎಂದು. ಅಲ್ಲಿ ಸಾವಿರಾರು ಜನ ಸತ್ಯಾಗ್ರಹಿಗಳು ಜೈಲನಲ್ಲಿದ್ದರೆ ಅವರಿಗೆ ಕೇವಲ 15-20 ಕಂಬಳಿಗಳನ್ನು ಕೊಟ್ಟರೆತ್ತ? ಅವು ಹೇಗೆ ಸಾಕಾಗುತ್ತವೆ! ನಾನು ಇನ್ನು ನೆನ್ನೆತಾನೆ ನನಗೆ ಸೊರಬ ತಾಲ್ಲೂಕಿನಿಂದ ಬಂದಿರತಕ ಫೋನ್ ಮೆಸೇಜ್ ವರದಿಯ ಪ್ರಕಾರ ಆ ಸತ್ಯಾಗ್ರಹಿಗಳನ್ನು ಲಾರಿಗಳಲ್ಲಿ ತುಂಬಿಕೊಂಡು ಹೋಗಿ ಧಾರ್ವಾಡ ಮತ್ತು ಕಾರ್ವಾರಗಳ ಅರಣ್ಯಗಳಲ್ಲ ನುರಿದು ಬರುತ್ತಿದ್ದಾರಂತೆ. ಆ ಜನರನ್ನೇನು ಸರ್ಕಾರವವರು ಮಂಗಗಳೆಂದು ಭಾವಿಸಿದ್ದಾರೋ ಹಾಗೆ ಕಾಡುಗಳಲ್ಲ ಅವರನ್ನು ಸರಿದುಬರುವುದಕ್ಕೆ! ಅವರು ತಮ್ಮ ಹಕ್ಕನ್ನು ಕಾಪಾಡಿಕೊಳ್ಳುವುದಕ್ಕೆ ಸತ್ಯಾಗ್ರವನ್ನು ಮಾಡಬಾರದೇನು! ಅದೂ ಶಾಂತರೀತಿಯಿಂದ. ಅದು ಪ್ರಜೆಗಳಿಗೆ ರಾಜ್ಯಾಂಗವಿದ್ದ ವಾಗಿ ಬಂದಿರುವ ಒಂದು ಹಕ್ಕು. ಹಾಗಿದ್ದರೂ ಆ ಸತ್ಯಾಗ್ರಹಗಳನ್ನು ಅಷ್ಟು ಅಮಾನುಷ ರೀತಿಯಲ್ಲ ಕಾಣುವುದಕ್ಕೇನು ಕಾರಣ? ಹುಳಗಳು ಬಿದ್ದಿರತಕ್ಕ ಅನ್ನವನ್ನು ಊಟಕ್ಕೆ ಕೊಡುತ್ತಿದ್ದಾರಂತೆ! ಇಂಥ ದಬ್ಬಾಳಿಕೆಯನ್ನು ನಡೆಸಬಾರದು. ಇದು ಬಹಳ ಜರೂರಾದ ಹಾಗೂ ಬಹಳ ಪ್ರಾಮ್ಯುವಾದ ಮತ್ತು ಸಾರ್ವಜನಿಕ ಪ್ರಾಮುಖ್ಯತೆಯನ್ನುಳ್ಳ ವಿಚಾರವಾಗಿದೆ. ಆದ್ದರಿಂದ ಇದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅನುಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎನ್. ಜಯಪ್ರಕಾಶ್‌ನಾರಾಯಣ (ಸಿರ್ಸಿ).—ಸ್ವಾಮಿ ನಾನು ಒಂದು ಪ್ರಾಮುಖ್ಯ ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು.—ನಾನು ತಮಗೆ ವೇಳೆಯನ್ನು ಬೇರೆ ಸಮಯದಲ್ಲಿ ಕೊಡುತ್ತೇನೆ.

ಶ್ರೀ ಎಂ. ಎಸ್. ಜಯಪ್ರಕಾಶ್‌ನಾರಾಯಣ್.—ನಾನು ನಮ್ಮ ಸಿರ್ಸಿ ತಾಲ್ಲೂಕಿನಲ್ಲ ನಡೆಯುವ ಒಂದು ಪ್ರಾಮುಖ್ಯ ವಿಚಾರವನ್ನು.....

ಅಧ್ಯಕ್ಷರು.—ಈಗ ಸಭೆಯ ಮುಂದೆ ಬಂದಿರತಕ್ಕ ನಿಲುವಳಿ ಸೂಚನೆಗೂ ಅದಕ್ಕೂ ಸಂಬಂಧ ಇಲ್ಲ.

Sri B. B. SAYANAK (Belgaum).—I rise to a point of order. When the hon. Speaker is on his legs can any hon. Member be moving in the House?

2-30 P.M.

Mr. SPEAKER.—I need not give any ruling on that point. When the Presiding Officer is on his legs everbody has to be seated.

Now I have heard Sri Bangarappa. There are two points involved the question of land reforms and the alleged treatment of political prisoners in the Jail. As regards the land reforms, it is a long standing question and this has to be decided by Government and it cannot form

part of the adjournment motion. As regards the ill-treatment given to the political prisoners in the Jails, it is a matter of administrative nature and it cannot form part of the adjournment motion under Rule 50. I am sure the Hon'ble Member requires some information about that. His intention is to attract the attention of the Government to these facts. I will allow him to give a short notice question, or a call attention notice with regard to the alleged treatment of political prisoners in jails. But I am sorry I cannot give my consent for his adjournment motion.

Absence of a member to move his Resolutions, Amendments, etc., under Rules

ಶ್ರೀ ಎಂ. ನಾಗಪ್ಪ (ರಾಯಚೂರು).—ಮಾನ್ಯ ಅಧ್ಯಕ್ಷರಲ್ಲಿ ನಾನು ಕೇಳುವುದಿಷ್ಟೆ: ನಿನ್ನೆಯ ದಿವಸ ಅಜೆಂಡಾದಲ್ಲಿ ನನ್ನ ಎರಡು ಸ್ವಾಚ್ಯುಟರಿ ರೆಜಲ್ಯೂಷನ್ಸ್ ಇದ್ದುವು. ಒಂದನೆಯದು ಡಿಸ್ ಅಪ್ರೂವಲ್ ಆಫ್ ಆರ್ಡಿನೆನ್ಸ್ ನಂ. 4, ಎರಡನೆಯದು, ಡಿಸ್‌ಅಪ್ರೂವಲ್ ಆಫ್ ಆರ್ಡಿನೆನ್ಸ್ ನಂ. 3. ಆದರೆ ಅಧ್ಯಕ್ಷರ ಅಪ್ಪಣೆಯ ಮೇರೆಗೆ ನಾನು ನಿನ್ನೆ ಹೊರಗೆ ಹೋಗಬೇಕಾಯಿತು. ಈ ಸಭೆ ಮುಗಿಯುವವರೆಗೂ ಈ ಸಭೆಯ ಘನತೆ, ಗಾಂಭೀರ್ಯಗಳನ್ನು ಕಾಯಬೇಕೆನ್ನುವ ದೃಷ್ಟಿಯಿಂದ ನಾನೂ ಏನೂ ನನ್ನ ಜೊತೆ ಸ್ನೇಹಿತರು ಹೊರಗೇ ಉಳಿದೆವು. ಅಧ್ಯಕ್ಷರು ನನ್ನ ಸ್ವಾಚ್ಯುಟರಿ ರೆಜಲ್ಯೂಷನ್ಸಿಗೆ ನಾನು ಗೈರುಹಾಜರಿದ್ದೆನೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ತಾವು ಅದನ್ನು ಪೋಸ್ಟ್‌ಪೋನ್ ಮಾಡಬೇಕಾಗಿತ್ತು. ಸ್ವಾಚ್ಯುಟರಿ ರೆಜಲ್ಯೂಷನ್‌ಗೆ ಮೂರು ದಿವಸಗಳ ನೋಟೀಸ್ ರೂಲ್ಸ್ ಪ್ರಕಾರ ಕೊಡಬೇಕು. ನಾನು 6 ವಾರಗಳ ಮುಂಚೆಯೇ ಈ ನಿರ್ಣಯವನ್ನು ಕೊಟ್ಟಿದ್ದೇನೆ. ಅದು ರೂಲ್ಸ್ ಪ್ರಕಾರ ಅಡ್ಮಿಟ್ ಆಗಿದೆ. ಅಜೆಂಡಾದಲ್ಲಿ ಬಂದಿದೆ. ಬಂದನಂತರ ಇದರ ಬಗ್ಗೆ ಚಾಪ್ಟರ್ 13ರಲ್ಲಿ ಯಾವ ನಿರ್ದೇಶನವೂ ಇಲ್ಲ. ಯಾವಾಗ ತೆಗೆದುಕೊಳ್ಳಬೇಕು, ಯಾವ ದೃಷ್ಟಿಯಿಂದ ಡಿಸ್‌ಪೋಸ್ ಮಾಡಬೇಕೆಂಬುದನ್ನು ಅಲ್ಲಿ ಹೇಳಲಲ್ಲ. ಇನ್ನು ಚಾಪ್ಟರ್ 15ರಲ್ಲಿ ಕೊಟ್ಟಿರುವುದನ್ನು ನೋಡಿದರೆ, ಅದರಲ್ಲಿ ಎಲ್ಲಿಯೂ ಸದಸ್ಯರು ಗೈರುಹಾಜರಾಗಿದ್ದರೆ ಅವರ ನಿರ್ಣಯ ಲ್ಯಾಪ್ಸ್ ಆಗುತ್ತದೆಂದು ಹೇಳಲಿಲ್ಲ. ಆದ್ದರಿಂದ ತಾವು ಅವರೆಡು ವಿಷಯಗಳನ್ನು ನಾಳೆ ಅಥವಾ ನಾಡಿದ್ದು ತಮಗೆ ಅನುಕೂಲ ಸಿಕ್ಕಿದಾಗ ಇಲ್ಲಿ ಚರ್ಚೆಗೆ ಅವಕಾಶಮಾಡಿಕೊಡಬೇಕು. ಆದುದರಿಂದ ನಾನು ಅಧ್ಯಕ್ಷರನ್ನು ಕೇಳಿಕೊಳ್ಳುವುದು ಏನೆಂದರೆ, ತಾವು ನಿನ್ನೆ ಮಾಡಿದಂತಹ ನಿರ್ಣಯ ಏನಿದೆ, ಅದನ್ನು ಪುನರಾಲೋಚಿಸಬೇಕು. ಲ್ಯಾಪ್ಸು ಮಾಡುವುದಕ್ಕೆ ಯಾವ ರೂಲ್ಸೂ ಇಲ್ಲ. ಆದ್ದರಿಂದ ದಯವಿಟ್ಟು ಅದನ್ನು ಅಜೆಂಡಾದಲ್ಲಿ ಪುನಃ ತೆಗೆದುಕೊಂಡು ಬರಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—I want to clarify one thing. A member should be present as per rules to move his resolution, amendments or whatever it may be. Supposing he is not present for any reason which is beyond his control, I want to know from the hon. Member whether the business of the House should be stopped ? The work of the House cannot be stopped. I want to know from the Hon. member whether he has got any authority or quotation to support his stand ? If there is no authority I will proceed further.

Sri M. NAGAPPA.—Under Rule 142 it is stated like this :

"If a resolution which has been admitted is not discussed during the session it shall be deemed to have been withdrawn."

(SRI M. NAGAPPA)

It should be withdrawn if a member is physically absent from the House. Supposing, a Member is absent from the House for reasons beyond his control, what should be done ? I have been sent out from the House. I don't say the business should be stopped. There was other business in the agenda. That could have been taken up and this resolution could have been postponed. It was within the powers of the Chair. There are residuary powers vested in the Chair. I will try to find out the rulings in this regard.

MR SPEAKER.—I will reserve my ruling till the Hon. Member furnished me with the details about this.

Answers to Questions tabled by Sri V. N. Patil

SRI V. N. PATIL (Humnabad).—I had sent some questions and those questions have not yet come up so far.

MR. SPEAKER.—I shall find out what has happened to those questions.

SRI V. N. PATIL.—Every time it is happening like this. My questions are very important.

MR. SPEAKER.—The hon. member may meet me in my chambers. I will try to help him.

SRI V. N. PATIL.—Every time I cannot come and meet the Hon. Speaker in his Chamber. The Government is unable to provide the answers for my questions.

MR. SPEAKER.—If the hon. member so desires he may give a notice of a motion to discuss this matter.

SRI V. N. PATIL.—Are you protecting my right ? If I send a question and that question is not answered by the Government, what should I do ?

MR. SPEAKER.—Let the hon. member give me the question number in writing and I shall find out the position.

SRI V. N. PATIL—I will give the question number, Sir.

MR. SPEAKER.—Let him give it to me in my chambers.

SRI V. N. PATIL.—I have a right to ask questions as per rules. I am not here to visit your chambers and curry favours from you. I am the last person to do that,

Personal Explanation by Sri S. Gopala Gowda re: a question of privilege raised by the Minister for Law, Labour and Parliamentary Affairs

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, 293ನೇ ವಿಧಿಯ ಪ್ರಕಾರ ನನ್ನೆದಿವಸ ನಡೆದ ಘಟನೆ ಮತ್ತು ನನ್ನ ವರ್ತನೆಯ ಬಗ್ಗೆ ನನ್ನ ವೈಯಕ್ತಿಕವಾದ ವಿವರಣೆಯನ್ನು ತಮ್ಮ ಅಪ್ಪಣೆ ಪಡೆದುಕೊಡಲು ಇಚ್ಛೆಪಡುತ್ತೇನೆ. ಈ ಸದನದ ಗೌರವ ಘನತೆ ಮತ್ತು ನಿಯಮಾವಳಿಗಳನ್ನು ಅನುಸರಿಸುವುದು ಮತ್ತು ಕಾಪಾಡುವುದು ತಮ್ಮ ಹಾಗೂ ಮಾನ್ಯ ಸಭೆಯ ಸದಸ್ಯರ ಮತ್ತು ಮುಂದುವರೆದು ಹೇಳಬೇಕೆಂದರೆ, ಗ್ಯಾಲರಿಯಲ್ಲಿರತಕ್ಕಂಥ ಪ್ರೇಕ್ಷಕ ಮಹನೀಯರ ಕರ್ತವ್ಯವಾಗಿರುತ್ತದೆ. ಇವೆಲ್ಲಾ ವಿಷಯಗಳನ್ನು ತಿಳಿದೂ ಕೂಡ ಒಮ್ಮೊಮ್ಮೆ ನನಗೆ ಸಭೆಯ ಹಕ್ಕುಬಾಧ್ಯತೆಗಳಿಗೆ ಧಕ್ಕೆ ತರುವ ರೀತಿಯಲ್ಲಿ ವರ್ತಿಸುವ ಪರಿಸ್ಥಿತಿ ಮತ್ತು ಉದ್ರೇಕಕರ ವಾತಾವರಣ ಉಂಟಾದುದಕ್ಕಾಗಿ ನಾನು ಬಹಳ ವಿಷಾದಿಸುತ್ತೇನೆ. ಅದರಿಂದಾಗಿ ನಾನು ಈಗ ಒಂದೆರಡು ವಿಷಯಗಳನ್ನು ವೈಯಕ್ತಿಕವಾಗಿ ಹೇಳಬೇಕಾಗಿದೆ. ನನಗೆ ಅಧಿಕ ರಕ್ತದ ಒತ್ತಡ ಇರುವುದರಿಂದ ಆಗಾಗ ಉದ್ರೇಕಗೊಳ್ಳುವುದಕ್ಕೆ ಅದು ಒಂದು ಕಾರಣ ಎಂದು ತಿಳಿದುಕೊಂಡಿದ್ದೇನೆ. ಆದರೆ ನಾನು ಈ ರಕ್ತದ ಒತ್ತಡದ ಮತ್ತು ಅನಾರೋಗ್ಯದ ಪರಿಸ್ಥಿತಿಯ ದುರ್ಲಾಭ ಅಥವಾ ಅನುಚಿತ ಲಾಭ ಪಡೆದು ಈ ಸಭೆಯ ಕಾರ್ಯಕಲಾಪಗಳಿಗೆ ಅಗೌರವ ತರುವಂಥ ಮತ್ತು ಧಕ್ಕೆಪಡಿಸುವಂಥ ಕಾರ್ಯಗಳಲ್ಲಿ ನಿರತನಾಗಬೇಕೆಂಬ ಉದ್ದೇಶ ನನಗೆ ಯಾವತ್ತೂ ಇಲ್ಲ. ನೆನ್ನೆದಿವಸ ನಾನು ಸದನಕ್ಕೆ ಬಂದು ಪ್ರಶ್ನೋತ್ತರಕಾಲದಲ್ಲಿ ಉಪಪ್ರಶ್ನೆಯನ್ನು ಹಾಕಲು ಎದ್ದಾಗ, ನಾನು ನಿಮ್ಮ ದೃಷ್ಟಿಗೆ ಬೀಳದೆ ಇದ್ದುದರಿಂದ ಮತ್ತು ಅಷ್ಟುಹೊತ್ತಿಗೆ ಸಾಕಷ್ಟು ಉಪಪ್ರಶ್ನೆಗಳನ್ನು ಹಾಕಿದ್ದರಿಂದ ತಾವು ಅನುಮತಿ ಕೊಡಲಿಲ್ಲ. ಅದಕ್ಕಾಗಿ ನಾನು ಉದ್ರೇಕಗೊಳ್ಳಬೇಕಾಯಿತು. ನಾನು ಸಿಟ್ಟಿಗೆ ಎದ್ದಾಗ ನನ್ನ ಕೈಕಾಲುಗಳು ಅಥವಾ ಬಾಯಿ ಏನು ಪ್ರತಿಕ್ರಿಯೆಯನ್ನು ಉಂಟುಮಾಡುತ್ತವೆ ಎಂದು ಹೇಳುವುದನ್ನು ನಾನು ಹೇಳಲಾರೆ. ಬಹಳ ಸಲ ನಾನು ನನ್ನ ಹತೋಟಿ ಮೀರಿ ವರ್ತಿಸಬೇಕಾಗುತ್ತದೆ. ಆ ಕಾರಣದಿಂದಲೇ ನನ್ನ ಮುಂದೆ ಇದ್ದಂತಹ ಮೈಕನ್ನು ಮುರಿದು ಬಿಸಾಕುವ ಪರಿಸ್ಥಿತಿ ಉಂಟಾಯಿತು. ಬಹುಶಃ ಆಗ ನನ್ನ ಕೈಲಿ ಯಾರದಾದರೂ ಕುತ್ತಿಗೆ ಅಥವಾ ಕೈ ಇದ್ದರೆ ಅದನ್ನು ಸಹ ಅಷ್ಟೇ ತೀವ್ರವಾಗಿ ತಿರುಗಿಸಿ ಬಿಸಾಕುತ್ತಿದ್ದೆ ಎಂದು ನನಗನ್ನಿಸುತ್ತದೆ. ಆದು ನನ್ನ ದುರದೃಷ್ಟಕರ. ಆ ರೀತಿ ನಾನು ಕೋಪತಾಪವನ್ನು ಪ್ರಕಟಿಸಬಾರದು, ಅದನ್ನು ನುಂಗಿಕೊಳ್ಳಬೇಕು, ಸಂಯಮವನ್ನು ಮೀರಬಾರದು ಎಂಬ ಪ್ರಜ್ಞೆ ನನಗೆ ಇದ್ದರೂ ಕೂಡ ಅನೇಕ ವೇಳೆ ನಾನು ಆದನ್ನು ಮೀರಿ ವರ್ತಿಸಿದ್ದುಂಟು. ನೆನ್ನೆ ಕೂಡ ಈ ಘಟನೆ ನಡೆಯಿತು. ಆ ಬಗ್ಗೆ ನಾನು ಬಹಳವಾಗಿ ಪಶ್ಚಾತ್ತಾಪ ಪಡುತ್ತೇನೆ. ಅದಕ್ಕಾಗಿ ನಾನು ಯಾವ ಷರತ್ತೂ ಇಲ್ಲದೆ, ಅಥವಾ ಅದರಿಂದ ಏನು ಶಿಕ್ಷೆಯಾಗಬಹುದು ಎನ್ನುವ ಭಯವೂ ಇಲ್ಲದೆ ತಮಗೆ ಹಾಗೂ ತಮ್ಮ ಮೂಲಕ ಈ ಸದನಕ್ಕೆ ನನ್ನ ಹೃದ್ಗತವಾದಂತಹ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

ಇನ್ನು ಈ ಮನೆಯ ಮಾನ್ಯಸದಸ್ಯರೆಲ್ಲರೂ ನಿಯಮಾವಳಿಗಳನ್ನು ಅರಿತಂತಹವರಾಗಿರುತ್ತಾರೆ. ಆದುದರಿಂದ ನನ್ನ ಪಕ್ಷದ ಸದಸ್ಯರ ಬಗ್ಗೆ ನಾನು ಒಂದೆರಡು ಅಭಯವಚನಗಳನ್ನು ತಮಗೆ ನೀಡಬಯಸುತ್ತೇನೆ. ಅವರು ನಿಷ್ಠಾವಂತ ವ್ಯಕ್ತಿಗಳು. ಅವರಿಗೆ ಸಾರ್ವಜನಿಕ ಸೇವೆಯನ್ನು ಮಾಡುವ ಆಕಾಂಕ್ಷೆ ಹಾಗೂ ಕಾತುರ ಇದೆ. ಈ ಸನ್ನಿವೇಶದಲ್ಲಿ ಅವರೇನಾದರೂ ಕೂಗಾಡಿದರೆ ತಾವಾಗಲೀ ಅಥವಾ ಈ ಸದನವೇ ಆಗಲೀ ತಪ್ಪು ತಿಳಿದುಕೊಂಡು ಅವರನ್ನು ಅಪರಾಧಿಗಳಂತೆ ಶಿಕ್ಷೆಮಾಡುವುದನ್ನು ತಾವು ಪರಿಶೀಲನೆ ಮಾಡಬೇಕು ಮತ್ತು ಅವರಿಗೆ ಶಿಕ್ಷೆ ವಿಧಿಸಕೂಡದು ಎಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಯಾಚಿಸಿಕೊಳ್ಳುತ್ತೇನೆ. ಇನ್ನು ಇದರ ಬಗ್ಗೆ ನಾನು ಇಲ್ಲಿ ಹೆಚ್ಚು ಹೇಳಬೇಕಾದ ಅಗತ್ಯವಿಲ್ಲ. ಮಾನ್ಯ ಸಂಸದೀಯ ವ್ಯವಹಾರ ಖಾತೆಯ ಮಂತ್ರಿಗಳು ನನ್ನ ಬಗ್ಗೆ ಹಕ್ಕು ಬಾಧ್ಯತಾ ಸೂಚನೆಯನ್ನು ಮಂಡಿಸಿ ತಮ್ಮಲ್ಲಿ ಅದಕ್ಕಾಗಿ ಅವಕಾಶವನ್ನು ಕೇಳಿದ್ದಾರೆ. ತಾವು ಅದಕ್ಕೆ ಅವಕಾಶ ನೀಡಿ ಇದರಿಂದ ಹಕ್ಕುಬಾಧ್ಯತೆಗೆ ಚ್ಯುತಿ ಬಂದಿದೆ ಎಂದು ಹಕ್ಕುಬಾಧ್ಯತೆ ಕಮಿಟಿಗೆ ಹೋದರೆ ಆಗ ನನ್ನನ್ನು ಆ ಕಮಿಟಿಯವರು ಸೆಳೆದರೆ ನನ್ನನ್ನು ವಿಚಾರಣೆ ಮಾಡುವಾಗ ನಾನು ಅವರಿಗೆ ಸಮಂಜಸವಾದ ವಿವರಣೆಗಳನ್ನು ಕೊಟ್ಟು ಅವರು ಕೊಡುವಂತಹ ಶಿಕ್ಷೆಯನ್ನು ಅನುಭವಿಸುತ್ತೇನೆ. ಶಿಕ್ಷೆಯನ್ನು ಕಡಿಮೆಮಾಡಿಸಿಕೊಳ್ಳಬೇಕು ಎನ್ನುವ ಒಂದು ಉದ್ದೇಶದಿಂದ ನಾನು ಇಲ್ಲ ವಿವರಣೆಗಳನ್ನು ಕೊಡುತ್ತಿಲ್ಲ ಎನ್ನುವ ಮಾತುಗಳನ್ನು ಇಲ್ಲಿ ಹೇಳುತ್ತಿದ್ದೇನೆ. ನಾನು ಅಂತಃಕರಣಪೂರ್ವಕವಾಗಿ ತಮಗೆ ಹಾಗೂ ತಮ್ಮ ಮೂಲಕ ಈ ಸದನಕ್ಕೆ ಅರಿಕೆ ಮಾಡಬಯಸುತ್ತೇನೆ. ಈ ಸದನನದ ವ್ಯವಹಾರಗಳಲ್ಲಿ ಆಳುವ ಪಕ್ಷದವರಿಗಿಂತ ನಾವು ಕಡಿಮೆ ಅನಕ್ಕೆ

(ಶ್ರೀ ಎಸ್. ಗೋಪಾಲಗೌಡ)

ಯುಳ್ಳವರಲ್ಲ ಎಂದು ಕಳಕಳಿಯಿಂದ ಹೇಳುತ್ತಿದ್ದೇನೆ. ತಾವು ಇದನ್ನು ತಪ್ಪಾಗಿ ಭಾವಿಸಬಾರದು. ಆಳುವ ಪಕ್ಷದವರಲ್ಲಿ ನಾನು ಇಲ್ಲಿ ಒಂದು ಮಹತ್ವಪೂರ್ಣ ವಿಚಾರ ಪ್ರಸ್ತಾಪ ಮಾಡುತ್ತೇನೆ. ನಾನು ರಾಷ್ಟ್ರಪತಿಯವರನ್ನು ಅಭಿನಂದನೆ ಮಾಡುವ ಒಂದು ನಿರ್ಣಯವನ್ನು ತಮಗೆ ಕಳುಹಿಸಿದ್ದೆ. ಅದಕ್ಕೆ ತಾವು ಹಿಂದೆಂದೂ ಇಂತಹ ಒಂದು ಅಭಿನಂದನಾ ನಿರ್ಣಯ ಬಂದಿಲ್ಲ, ಆದುದರಿಂದ ಅದಕ್ಕೆ ಅನುಮತಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದಿರಿ. ತಾವು ಹೇಳಿದ ಮಾತನ್ನು ನಾನೂ ಒಪ್ಪುತ್ತೇನೆ. ಆದರೆ ನಾನು ರಾಷ್ಟ್ರಪತಿಯಾದಂತಹ ವ್ಯಕ್ತಿಗೆ ರಾಜ್ಯಾಂಗಬದ್ಧವಾಗಿ ಗೌರವ ಸಲ್ಲಬೇಕು ಎಂದು ತಿಳಿದು ಇಂತಹ ಒಂದು ಅಭಿನಂದನೆ ಸಲ್ಲಿಸಬೇಕು ಎಂದು ಇಲ್ಲಿ ನಿರ್ಣಯವನ್ನು ಕಳುಹಿಸಿದ್ದೆ. ಇಂತಹ ಒಂದು ಸತ್ಸಂಪ್ರದಾಯವನ್ನು ಇನ್ನು ಮುಂದಾದರೂ ನಾವು ಹಾಗೂ ಲೋಕ ಸಭೆಯವರು ಮತ್ತು ರಾಷ್ಟ್ರದ ಎಲ್ಲ ವಿಧಾನ ಸಭೆಗಳವರೂ ಹಾಗೂ ಪರಿಷತ್ತುಗಳವರೂ ಅನುಸರಿಸಬೇಕು. ರಾಷ್ಟ್ರಪತಿಗಳ ಸ್ಥಾನ ವಿಧಾನ ಸಭಾಪತಿಗಳ ಹಾಗೂ ಪರಿಷತ್ತುಗಳ ಸಭಾಪತಿಗಳ ಸ್ಥಾನದಂತೆ ಆಗಬಾರದು. ಕೊನೆಯ ಪಕ್ಷ ತಮ್ಮ ಅನುಮತಿ ಪಡೆದು ಈ ರಾಜ್ಯದಲ್ಲಿ ಯಾರ್ಯಾರು ಶ್ರೀ ಎ. ಎ. ಗಿರಿಯಪ್ಪರಿಗೆ ಬೆಂಬಲ ನೀಡಿ ಮತದಾನ ನೀಡಿದರೋ ಅವರ ಪರವಾಗಿ, ತಮ್ಮ ಪರವಾಗಿ ಮತ್ತು ಈ ಸದನದ ಪರವಾಗಿ ನಮ್ಮೆಲ್ಲರ ಪೂರ್ಣವಾದ ಅಭಿನಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ (ಕಾನೂನು, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಸ್ವಾಮಿ, ಮಾನ್ಯ ಸದಸ್ಯರಾದಂಥ ಶ್ರೀಮಾನ್ ಗೋಪಾಲಗೌಡರು ಈಗ ಆಡಿದಂಥ ಮಾತುಗಳು ಮುತ್ತಿನಂತಹ ಮಾತುಗಳು ಎಂದು ಹೇಳುವುದಕ್ಕೆ ನನಗೆ ಅತ್ಯಂತ ಸಂತೋಷ. ಈ ಸಭೆಯ ಕಾರ್ಯಕರಣಾಪಗಳು ಮತ್ತು ಶಿಸ್ತುನಿಯಮಗಳ ಪಾಲನೆ ಬಗ್ಗೆ ಯಾವುದೇ ಚರ್ಚೆಗೆ ಬಂದರೂ ಕೂಡ ಶ್ರೀಮಾನ್ ಗೋಪಾಲಗೌಡರು ಹೇಳುವಂಥಾ ಮಾತುಗಳು ಉಲ್ಲೇಖನೀಯ ಯೋಗ್ಯವಾದವುಗಳು. ಅವರು ಮಾತನಾಡುವಂಥ ಸಮಯದಲ್ಲಿ ನಮ್ಮೆಲ್ಲರ ಅಂಕಿಕರಣವೂ ಕೂಡ ಕರಗಿ ನೀರಾಗಿದೆ ಎಂದು ಭಾವನೆ ಮಾಡಿಕೊಂಡಿದ್ದೇನೆ. ಅವರ ಆರೋಗ್ಯ ಸ್ಥಿತಿ ಈ ಸಭೆಯಲ್ಲಿ ನೋಡಿದಾಗ, ಕೇಳಿದಾಗ ನಾನು ವೈಯಕ್ತಿಕವಾಗಿ ಅತ್ಯಂತ ಚಿಂತೆಗೊಳಗಾಗಿದ್ದೇನೆ; ವ್ಯಸನಕ್ಕೆ ಈಡಾಗಿದ್ದೇನೆ ಎಂದು ಹೇಳಿದಾಗ ಈ ಸಭೆಯ ಸದಸ್ಯರು ನಂಬುತ್ತಾರೆಂದು ತಿಳಿದುಕೊಂಡಿದ್ದೇನೆ. ಮಹಾತ್ಮಾ ಗಾಂಧಿಯವರು ಹೇಳುತ್ತಾ ಇದ್ದರು; ಕತ್ತಲೆ ಆದಮೇಲೆ ಬೆಳಕು, ಬೆಳಕು ಆದಮೇಲೆ ಕತ್ತಲೆ ಎಂದು. ಆದುದರಿಂದ ಬೆಳಕನ ಬೆನ್ನೆ ಗೊತ್ತಾಗಬೇಕಾದರೆ ಕತ್ತಲೆ ಇರಬೇಕು. ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರಂಥಹವರು, ಮಾತನಾಡುವಂಥಹವರು ಇಲ್ಲಿ ಇರಬೇಕು. ಈ ಸಭೆಯಲ್ಲಿ 17 ವರ್ಷದಿಂದಲೂ ಸದಸ್ಯರಾಗಿದ್ದಾರೆ. ಅವರ ರಾಜಕೀಯ ಜೀವನ ಆದಕ್ಕಿಂತಲೂ ಹೆಚ್ಚಿನ ಕಾಲವಿದು. ಅವರು ಸ್ವಾತಂತ್ರ್ಯ ಸಮಯದಲ್ಲಿ ಹೋರಾಡಿದರು. ದೇಶಾಭಿಮಾನದಿಂದ ಕೂಡಿರತಕ್ಕಂಥಾವರು. ಆರ್ಥಿಕ ಸ್ಥಿತಿ ಉತ್ತಮವಾಗಬೇಕು ಎಂದು ಬಯಸುವವರು. ಅವರಿಗೆ ದೇಶಾಭಿಮಾನದ ವಿಚಾರದಲ್ಲಿಯಾಗಲೀ, ಅಥವಾ ಈ ಸಭೆಯ ನಿಯಮಾವಳಿಗಳನ್ನು ಪಾಲನೆ ಮಾಡಬೇಕು ಎನ್ನುವ ವಿಚಾರದಲ್ಲಿಯಾಗಲಿ ಅದರ ಬಗ್ಗೆ ಯಾರಿಗೂ ಸಂಶಯವಿಲ್ಲ. ದುರಾದೃಷ್ಟ ಏನೋ ಪ್ರಸಂಗ ಆಗಿಹೋಯಿತು. ನಾನಾದರೂ ಸ್ವಾಮಿ, ನಿನ್ನೆ ತಮ್ಮ ಅವಗಾಹನೆಗೆ ಒಂದು ಸೂಚನೆಯನ್ನು ಮಂಡಿಸಿದ ಕಾಲದಲ್ಲಿ ಅವರಲ್ಲಿರತಕ್ಕಂಥ ಶ್ರದ್ಧೆ, ಆಸಕ್ತಿ ಅದರ ಬಗ್ಗೆ ಹೇಳಿದ್ದೇನೆ. ಈಗ ನಡೆದಂಥಾ ಘಟನೆ ತಮಗೆಲ್ಲಾ ಗೊತ್ತಿದೆ. ಈ ವಿಚಾರವಾಗಿ ಯಾವ ಮಾತು ಕೂಡ ಆಡಲಲ್ಲ. ಸ್ವಾಮಿ, ಈ ಸೂಚನೆಯನ್ನು ಸಭೆಯ ಮುಂದೆ ಮಂಡಿಸುವಾಗ ನನ್ನ ಕರ್ತವ್ಯದೃಷ್ಟಿಯಿಂದ ಮಂಡಿಸಿದನೇ ಹೊರತು ಶ್ರೀಮಾನ್ ಗೋಪಾಲ ಗೌಡರ ಮೇಲೆ ಏನಾದರೂ ಒಂದು ಆಪಾದನೆ ಮಾಡಬೇಕು, ಅಥವಾ ಆ ಮೂಲಕ ಅವರು ಯಾವುದಾದರೂ ಒಂದು ಶಿಕ್ಷೆಗೆ ಒಳಗಾಗಬೇಕು ಎನ್ನುವ ದೃಷ್ಟಿಯಿಂದ ಮಾಡಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸೂಚನೆಯನ್ನು ಮಾಡುತ್ತಾ ಹೇಳಿದರು, ನಾನು ತಮ್ಮ ಮುಂದೆ ಮಂಡಿಸಿದಂಥ ಸೂಚನೆಯನ್ನು ಕೈಬಿಡಬೇಕು ಎಂದು. ನಾನು ಆಗಲೇ ಆಲೋಚನೆ ಮಾಡಿದೆ. ಈ ಸೂಚನೆಯನ್ನು ಕೈಬಿಡಲು ನಾನು ಸಮರ್ಥನೆ ಎಂಬ ವಿಚಾರವನ್ನು ಆಲೋಚನೆ ಮಾಡಿದೆ. ಈ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ವಿಚಾರವನ್ನು ಚರ್ಚೆಗೆ ಈ ಸಭೆಯ ಮುಂದೆ ಇಡುವ ವೇಳೆಯಲ್ಲಿ ವಿರೋಧ ಪಕ್ಷದ ನಾಯಕರು ಯಾವುದಾದರೂ ಒಂದು ಸಲಹೆ ಮಾಡಿದ್ದರೆ, ಅದನ್ನು ಕೈಬಿಡಬೇಕೇ, ಅಥವಾ ಮುಂದುವರಿಸಬೇಕೇ ಎಂದು ಪರಿಶೀಲನೆ ಮಾಡುವ ಜವಾಬ್ದಾರಿ ಅಧ್ಯಕ್ಷರಿಗೆ ಸಂಬಂಧಪಟ್ಟಿದ್ದು. ಈ ಸೂಚನೆಯನ್ನು ತಮ್ಮ ಮುಂದೆ ಮಂಡಿಸಿದಮೇಲೆ ನನ್ನ ವೈಯಕ್ತಿಕ ಅಭಿಪ್ರಾಯದ ಮೇಲೆ ಆಗಲಿ, ಯಾವ ಸದಸ್ಯರೇ ಆಗಲಿ ಪಾಪವನ್ನು ತೆಗೆದುಕೊಳ್ಳುವುದಕ್ಕೆ ಹಕ್ಕಿಲ್ಲ.

ಅದು ಎಲ್ಲರ ಹಕ್ಕುಭಾದ್ಯತೆಗಳಿಗೂ ಸಂಬಂಧಪಟ್ಟದ್ದು. ತಮ್ಮ ಮುಂದೆ ಮುಂಡಿಸಿದಂಥ ಸೂಚನೆಯನ್ನು ಹಕ್ಕುಭಾದ್ಯತೆಗಳ ನಿಯಮಾವಳಿಗಳ ಪ್ರಕಾರವೇ ತೀರ್ಮಾನವಾಗಬೇಕೆ ವಿನಃ ವೈಯುಕ್ತಿಕವಾಗಿ ಸೂಚನೆ ಮಾಡಿದಂಥ ಸದಸ್ಯರು ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಈ ಕಾರಣದಿಂದ ನಿನ್ನೆ ವಿರೋಧ ಪಕ್ಷದ ನಾಯಕರು ಸೂಚನೆ ಮಾಡಿದಾಗ ಅದನ್ನು ಒಪ್ಪಿಕೊಳ್ಳುವುದಕ್ಕೆ ಆಗಲಲ್ಲ. ನಾನು ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ ಎಂದು ಹೇಳಲಿಲ್ಲ. ಈ ನಿರ್ಣಯದ ಮುಂದುವರಿಕೆ ವಿಚಾರ ಸಭೆಗೆ ಬಿಟ್ಟಿದ್ದು, ತಮಗೆ ಬಿಟ್ಟದ್ದು, ಅದರ ಪರಿಣಾಮವನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಹೇಳಿಕೆಯನ್ನು ಮಾಡಿಲ್ಲ ಎಂದು ಮಾನ್ಯ ಗೋಪಾಲ ಗೌಡರು ಹೇಳಿದ್ದಾರೆ. ಆದರಲ್ಲಿ ಕೂಡ ನನಗೆ ಸ್ಪಷ್ಟವಾದ ನಂಬಿಕೆ ಇದೆ. ನಾನು ವೈಯುಕ್ತಿಕವಾಗಿ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಅವಕಾಶವಿದ್ದಿದ್ದರೆ ನಾನು ಯಾವ ಮರು ಮಾತೂ ಆಡದೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಿದ್ದೆ. ಆ ನಿರ್ಣಯವನ್ನು ತಾವು ಪರಿಶೀಲನೆ ಮಾಡಿ ತಮ್ಮ ವಿವೇಚನೆಯಿಂದ ತಾವು ಆದಕ್ಕೆ ಅವಕಾಶ ಕೊಡದೆ ಹೋದರೆ ನಾನು ಅದರಿಂದ ದುಃಖಿತನಾಗುವುದಿಲ್ಲ, ಅವಕಾಶ ಕೊಟ್ಟರೆ ಸಂತೋಷವೂ ಪಡುವುದಿಲ್ಲ. ಈ ನಿರ್ಣಯ ಸಭೆಯಲ್ಲಿ ಚರ್ಚೆಯಾಗಬೇಕು, ಅವರು ತೀರ್ಮಾನ ಮಾಡಬೇಕು ಎನ್ನುವಂಥ ಪರಿಸ್ಥಿತಿಯನ್ನು ಕೂಡ ನಾನು ಅಪೇಕ್ಷೆ ಪಡುವುದಿಲ್ಲ. ಕಾನೂನು ಪ್ರಕಾರ ತಮಗೆ ಅವಕಾಶವಿದ್ದರೆ, ಈ ಮಾತುಗಳನ್ನೆಲ್ಲ ಕೇಳಿದ ಮೇಲೆ ತಮ್ಮ ವಿವೇಚನೆಯಿಂದ ಅದನ್ನು ಕೈ ಬಿಡುವುದಾದರೆ ನಾನು ಅತ್ಯಂತ ಸಂತೋಷಪಡುತ್ತೇನೆ.

3-00 P.M.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ನಿನ್ನೆಯ ದಿವಸ ಸಭೆಯಲ್ಲಿ ಅವರು ನಿರ್ಣಯವನ್ನು ಇಟ್ಟಾಗ ನಾನು ಒಂದು ಕ್ರಿಯಾಲೋಪವನ್ನು ಎತ್ತಿದ್ದೇನೆ. ಅದು ತಮ್ಮ ಗಮನದಲ್ಲಿದೆ. ಅವನ್ನು ವಿಚಾರ ಮಾಡುತ್ತೇನೆಂದು ತಾವು ಹೇಳಿದಿರಿ. ಶ್ರೀಮಾನ್ ಪುಟ್ಟಸ್ವಾಮಯ್ಯನವರು ಬಹಳ ಬುದ್ಧಿವಂತಿಕೆಯಿಂದ ಭಾಷಣ ಮಾಡಿದರು; ಮನುಷ್ಯನಿಗೆ ಬುದ್ಧಿವಂತಿಕೆ ಇರಬೇಕು. ಅದರ ಜೊತೆಗೆ, ನಾನು ನಿನ್ನೆಯ ದಿನ ಹೇಳಿದಹಾಗೆ ಮಾನವೀಯತೆಯೂ ಇರಬೇಕು. ಅವರು ಹೇಳಿರತಕ್ಕ ಪ್ರಕಾರ ಆ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಹಕ್ಕಿಲ್ಲ ಎಂದು ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ಅವರು ಹೇಳಿದ ಮಾತಿನಲ್ಲಿ ಒಂದು ಅರ್ಥವಿದೆ. ಅವರು ಒಂದು ಸಲಹೆಯನ್ನು ಕೊಡಬಹುದಾಗಿತ್ತು. ನಾನು ನಿರ್ಣಯವನ್ನು ಇಟ್ಟಿದ್ದೇನೆ, ಈ ಸಭೆಯ ಅನುಮತಿ ಇದ್ದರೆ ನಿರ್ಣಯವನ್ನು ಇಲ್ಲಿಗೇ ಬಿಡಬಹುದು ಎಂದು ಹೇಳಬಹುದಾಗಿತ್ತು. ತಮ್ಮ ವಿವೇಚನೆಗೆ ಬಿಟ್ಟಿದ್ದೇನೆಂದು ಅವರು ಹೇಳಿದ್ದಾರೆ. ಇದರಲ್ಲಿ ರೂಲ್ ಆಡ್ಡ ಬರುವುದಿಲ್ಲ ಎಂದು ನನಗಾದರೂ ಅನ್ನಿಸುತ್ತದೆ. ಯಾವ ನಿಯಮವೇ ಇರಲಿ ತಮ್ಮ ಅನುಮತಿಯನ್ನು ಕೇಳಿದುಕೊಂಡರೆ ಅದರಿಂದ ವಿನಾಯಿತಿ ಪಡೆಯುವುದಕ್ಕೆ ನಮ್ಮ ನಿಯಮಾವಳಿಯಲ್ಲಿ ಬೇಕಾದಷ್ಟು ಅವಕಾಶವಿದೆ, ಇದು ತಮಗೂ ಗೊತ್ತಿದೆ. ನಾನು ಆ ನಿಯಮವನ್ನು ಓದುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಗೋಪಾಲ ಗೌಡರು ಸ್ಪಷ್ಟಪಡಿಸಿದ್ದಾರೆ, ನಾನೇನಾದರೂ ಹೆದರಿ ಇದನ್ನು ಬಿಡಿ ಎಂದು ಹೇಳುವುದಿಲ್ಲ, ನಾನು ಮಾಡಿದ್ದು ತಪ್ಪು ಎಂದು ನನಗೆ ಮನವರಿಕೆಯಾಗಿದೆ ಎನ್ನುವ ಕಳಕಳಿಯ ಮನವಿಯನ್ನು ಸಭೆಯಮುಂದೆ ಇಟ್ಟಾಗ ಅದನ್ನು ಪುನಃ ಹಕ್ಕು ಭಾಧ್ಯತಾ ಸಮಿತಿಗೆ ಹಾಕತಕ್ಕುದರ ಔಚಿತ್ಯವಿದೆಯೇ ಎನ್ನುವುದನ್ನು ನಾನು ಇಲ್ಲಿ ಪ್ರಶ್ನಿಸ ಬೇಕಾಗಿದೆ.....

Sri K. PUTTASWAMY.—The Speaker has not given consent so far. He can refuse giving consent.

Sir, I want to clarify one point. You have not so far given your consent for my moving the motion. This is a motion which concerns the rights and privileges of the House. In my humble opinion, when I bring forward such motion the entire House is seized of the matter and the Speaker is seized of the matter. Before asking the House, the Speaker has to decide whether he is going to permit the motion to be moved or not. So much has been said about it and it is up to you to take into consideration all these things and refuse to give consent. I have made it clear. If you find you are able to refuse to give your consent, I shall be quite happy. I can say that I will be one of the happiest members.

Mr. SPEAKER.—I am very happy to hear the statements made by the hon. Member Sri S. Gopala Gowda, the Minister for Parliamentary Affairs and also the observation made by the hon. Member Sri H. Siddaveerappa. It was really unfortunate that things should have happened the way they happened. When this incident occurred I just thought within myself whether this is not the breach of privilege for the entire House to take notice of. The thing that happened was in the full view of the House. Anybody could take action but now there if no need to take action. Any action of disciplinary nature is to prevent recurrence of such things in future. That is one of the principal things. In that context, when Sri Gopala Gowda expressed his penitence for what has happened here, I do not think there is any necessity to proceed with it. In our great scriptures it is stated that a person who expresses his heartfelt sincere penitence is to be forgiven even for the greatest of sins. Therefore his penitence has got great value more value than punishments under the rules of procedure or provisions of the constitution or any statute. I therefore think that there is no necessity to go ahead with it and therefore I do not feel it necessary now to give my consent to it.

One thing I wish to say that we are developing a sense of discipline in this House. Yesterday, unfortunately I had to direct the withdrawal of three members from the House. I am happy they complied with it immediately and they did not think of committing breach of my direction. I am happy about it and I express my sense of appreciation and today Sri Gopala Gowda has made a statement which will go a long way to see that no such atmosphere of indiscipline prevails in this House. I sincerely request the Hon. Members to catch up this spirit of discipline and try to serve the people for which all of us are here. Let us try to help the people in the best way possible. I am sure that in democracy there are bound to be differences of opinion. The Government may put up certain propositions before the House which may not be palatable to the opposition and the opposition might say something unpalatable to the Government. But there is a way to resolve these things by argument and debate. The majority is bound to rule but at the same time the minority shall have the right of say. That is the position in democracy. But then there should be no scope for any indiscipline or disorderly behaviour here. I request the members to take a sort of inspiration from what has happened. Therefore, I do not think there is any necessity to proceed further in the matter and I think the chapter so far as what happened yesterday is closed.

Suspension of the S. S. P. Members on 21-9-69

Mr. SPEAKER.—I have received a note from the hon. Member Sri Nagappa to the effect that only members of the S.S.P. have been asked to withdraw from the House yesterday. It is incorrect. I found that

the withdrawal of only three members was necessary in the interest of discipline and I did it most painfully. I may assure hon. Members that it did not please me at all to give such a direction. I did it as a last resort and that too only to maintain the dignity and decorum of the House. There is no ill-will or malice or anything of that sort against the S. S. P. Members. I have absolutely no animus against any of them. All parties and groups are the same to me. If any such thing has appeared in newspapers, it is incorrect.

Sri M. NAGAPPA (Raichur).—It is stated in the newspaper that for the remainder of the session we are all suspended.

Mr. SPEAKER.—It is wrongly published.

Sri M. NAGAPPA.—So, I want to move a motion of breach of privilege.

Mr. SPEAKER.—I shall try to find out how it has appeared in the papers.

Sri M. NAGAPPA.—I shall send the newspaper to you.

Mr. SPEAKER.—I shall take note of it.

Calling Attention Notice to a matter of urgent public importance *re*: Strike by House Surgeons in the State

Sri M. NAGAPPA.—I beg to call the attention of the Health Minister regarding the strike by the House Surgeons.

Sri Y. RAMAKRISHNA (Minister for Health).—Sir, the demands of the House Surgeons are.—

(1) To increase the stipends from Rs. 150 to Rs. 250 monthly;

(2) To convert the post of non-stipendiary posts to the stipendiary ones;

(3) Appointment of post-graduates for the whole course on stipendiary basis at Rs. 250 monthly;

(4) To provide quarters for all; and

(5) To give stipends to Rotating House Surgeons who are from the Private Medical Colleges also.

As regards the first demand of increased stipends from Rs. 150 to Rs. 250, it is difficult to concede for the reasons that the stipends have been increased from Rs. 100 to Rs. 150 only in the last September 1968. This cost an extra expenditure of Rs. 2,01,000.

The stipends have been enhanced from Rs. 100 to Rs. 150 taking into consideration the recommendations of the Indian Medical Council. Even Tukol Commission has recommended the same. The financial